FEBRUARY 07, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ನೈಋತ್ಯ ರೇಲ್ವೆ: ಅಳ್ನಾವರ–ದಾಂಡೇಲಿ ಮಧ್ಯೆ, ನೂತನ** ರೈಲು ಸೇವೆಗೆ, ಇಂದು ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಚಾಲನೆ.

**ಸಂಸದರ ಖೇಲ್ ಹಾಗೂ ಸಾಂಸ್ಕೃತಿಕ ಮಹೋತ್ಸವ;** ಅಂತಾರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ, ಹುಬ್ಬಳ್ಳಿಯಲ್ಲಿ ಇಂದು ಚಾಲನೆ.

**17ನೇ ಆವೃತ್ತಿಯ, ಬೆಂಗಳೂರು ಅಂತಾರಾಷ್ಟ್ರೀಯ** ಚಲನಚಿತ್ರೋತ್ಸವಕ್ಕೆ ತೆರೆ; ‘ವನ್ಯಾ’ ಕನ್ನಡ ಭಾಷೆಯ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ, ಭಾಜನ.

**14ನೇ ಒಣ ಮೆಣಸಿನಕಾಯಿ ಮೇಳ;** ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದಲ್ಲಿ, ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಆಯೋಜನೆ.

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡ ಜಿಲ್ಲೆ ಅಳ್ನಾವರ** ಹಾಗೂ ಉತ್ತರಕನ್ನಡ ಜಿಲ್ಲೆ ದಾಂಡೇಲಿ ಮಧ್ಯೆ ನೂತನ ಡೆಮೋ ರೈಲು ಸೇವೆಗೆ, ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಇಂದು ಸಂಜೆ ನಾಲ್ಕು ಗಂಟೆಗೆ, ದಾಂಡೇಲಿ ರೈಲು ನಿಲ್ದಾಣದಲ್ಲಿ, ಹಸಿರು ಧ್ವಜ ತೋರಲಿದ್ದಾರೆ. ಕೊರೋನೋತ್ತರ ಕಾಲದಲ್ಲಿ, ತಾತ್ಕಾಲಿಕವಾಗಿ ನಿಲುಗಡೆಯಾಗಿದ್ದ, ರೈಲು ಸೇವೆ ನಾಡಿದ್ದು, 9ನೇ ತಾರೀಖಿನಿಂದ, ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಿಸಲಿದೆ. ತಲಾ 4 ಬೋಗಿಗಳ, ಐದು ಡೆಮೋ ರೈಲುಗಳು, ಭಾನುವಾರ ಹೊರತುಪಡಿಸಿ, ವಾರಕ್ಕೆ 6 ದಿನಗಳು, ದಿನಂಪ್ರತಿ ಅಳ್ನಾವರ ಹಾಗೂ ದಾಂಡೇಲಿ ರೇಲ್ವೆ ನಿಲ್ದಾಣಗಳ ಮಧ್ಯೆ ಸಂಚರಿಸಲಿವೆ ಎಂದು, ನೈಋತ್ಯ ರೈಲ್ವೆ, ಹುಬ್ಬಳ್ಳಿ ವಿಭಾಗದ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕನಮಡಿ, ತಿಳಿಸಿದ್ದಾರೆ.

<><><>

**ನೈಋುತ್ಯ ರೇಲ್ವೆ,** ಹೋಳಿ ಹಬ್ಬದ ಹಿನ್ನೆಲೆ, ಪ್ರಯಾಣಿಕರ ಸುಗಮ ಸಂಚಾರಕ್ಕೆ ಅನುವು ಮಾಡಲು, 47 ರೈಲುಗಳ ವಿಶೇಷ ಸೇವೆಗೆ, ವಿವಿಧ ಮಾರ್ಗಗಳಲ್ಲಿ ಕಾರ್ಯಾಚರಿಸುವಂತೆ, ಯೋಜಿಸಿದೆ. ನೈಋುತ್ಯ ರೇಲ್ವೆ, 14 ಹೆಚ್ಚುವರಿ ವಿಶೇ ’ ರೈಲುಗಳನ್ನು ಓಡಿಸುವ, ಪ್ರಸ್ತಾವ ಹೊಂದಿದೆ. ವಿಶೇಷ ರೈಲುಗಳು, ಧನ್‌ಬಾದ, ಹೃಷಿಕೇಶ, ಜೈಸಲ್ಮೇರ್, ಕಣ್ಣೂರು ಹಾಗೂ ವಾರಾಣಸಿ ಸೇರಿದಂತೆ, ಹಲವು ಪ್ರಮುಖ ನಗರಗಳಿಗೆ, ಪ್ರಯಾಣಿಕರನ್ನು ತಲುಪಿಸಲಿವೆ. ಪ್ರಮುಖ ಹಬ್ಬಗಳ ಸಂದರ್ಭದಲ್ಲಿ, ಭಾರತೀಯ ರೇಲ್ವೆ, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿ, ಸುರಕ್ಷಿತ ಹಾಗೂ ದಕ್ಷ ರೇಲ್ವೆ ಕಾರ್ಯಾಚರಣೆಗೆ ಆದ್ಯತೆ ನೀಡಲು ಬದ್ಧವಾಗಿದೆ ಎಂದು, ನೈಋುತ್ಯ ರೇಲ್ವೆ ತಿಳಿಸಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ,** ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವದ ಅಂಗವಾಗಿ, ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ಹುಬ್ಬಳ್ಳಿಯಲ್ಲಿ, ಇಂದು ಮತ್ತು ನಾಳೆ, ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ ಆಯೋಜಿತವಾಗಿದೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಕುಸುಗಲ್ ರಸ್ತೆಯ, ಕೇಶ್ವಾಪುರದ ಆಕ್ಸಫರ್ಡ್ ಕಾಲೇಜು ಮೈದಾನದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವಕ್ಕೆ, ಚಾಲನೆ ನೀಡಲಿದ್ದಾರೆ ಎಂದರು. ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, ಆಹಾರ ಉತ್ಸವ ಹಾಗೂ, ದೇಸಿ ಕ್ರೀಡೆಗಳಾದ ಮಲ್ಲಕಂಬ, ಲಗೋರಿ, ಗಿಲ್ಲಿದಾಂಡು, ಯೋಗಾಸನ, ಗೋಲಿ ಸ್ಪರ್ಧೆಗಳು ನಡೆಯಲಿವೆ ಎಂದು, ಕೇಂದ್ರ ಸಚಿವ ಜೋಶಿ ನುಡಿದರು. ನಾಳೆ ಬೆಳಗ್ಗೆ 9.30 ರಿಂದ ವಿಶಿಷ್ಟ ಗಾಳಿಪಟ ಹಾರಾಟದ ಪ್ರದರ್ಶನ ನಡೆಯಲಿದ್ದು, 30ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಖ್ಯಾತಿಯ ಗಾಳಿಪಟ ಪಟುಗಳು, ಸಾಂಸ್ಕೃತಿಕ ಪರಂಪರೆ ಹಾಗೂ ಸೊಗಡು ಬಿಂಬಿಸುವ, ಅಪರೂಪದ ಗಾಳಿಪಟಗಳನ್ನು ಹಾರಾಡಿಸಲಿದ್ದಾರೆ. ಮಧ್ಯಾಹ್ನ 12.30ಕ್ಕೆ ಮಕ್ಕಳು ಹಾಗೂ ಸಾರ್ವಜನಿಕರಿಗಾಗಿ, ದೇಸಿ ಕ್ರೀಡೆಗಳು ನಡೆಯಲಿವೆ ಎಂದು, ಸಂಸದ ಜೋಶಿ ತಿಳಿಸಿದ್ದಾರೆ.

<><><>

**‘ನನ್ನ ಭೂಮಿ’ ಅಭಿಯಾನದಡಿ,** 50 ಕೋಟಿ ಪುಟಗಳಷ್ಟು, ರಾಜ್ಯದ ಭೂ ದಾಖಲೆಗಳನ್ನು, ಸ್ಕ್ಯಾನ್ ಮಾಡಲಾಗಿದ್ದು, ‘ಭೂ ಸುರಕ್ಷಾ’ ಯೋಜನೆಯಡಿ, ಪಾರದರ್ಶಕತೆ ಖಾತ್ರಿ ಪಡಿಸಿ, ಪೋಡಿ ಕಾರ್ಯದ ವೇಗ ವರ್ಧಿಸಲಾಗಿದೆ ಎಂದು, ಕಂದಾಯ ಖಾತೆ ಸಚಿವ, ಕೃ ್ಣ ಬೈರೇಗೌಡ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ಈ ವಿಷಯ ತಿಳಿಸಿದ ಅವರು, ಕಳೆದ ಒಂದು ವರ್ಷದಲ್ಲಿ, ರಾಜ್ಯಾದ್ಯಂತ, 1 ಲಕ್ಷ 49 ಸಾವಿರದ 600 ಜಮೀನುಗಳ ಪೋಡಿ ಕಾರ್ಯ, ಪೂರ್ಣಗೊಂಡಿದೆ ಎಂದರು. ರೈತರು ತಮ್ಮ ಜಮೀನಿನ ಪೋಡಿಗಾಗಿ, ಕಚೇರಿಗಳಿಗೆ ಅಲೆಯುವ ಅಗತ್ಯವಿಲ್ಲ; ಅಧಿಕಾರಿಗಳೇ ರೈತರ ಜಮೀನುಗಳಿಗೆ ತೆರಳಿ, ದಾಖಲೆಗಳನ್ನು ಸಿದ್ಧಪಡಿಸುತ್ತಿದ್ದಾರೆ. ಡಿಜಿಟಲ್ ಆಪ್ ಮೂಲಕ, ಸಮೀಕ್ಷಾ ಕಾರ್ಯ ನಡೆದಿದೆ ಎಂದು, ಸಚಿವರು ಹೇಳಿದರು.

<><><>

**ಕೃಷ್ಣ ಬೈರೇಗೌಡ ಧ್ವನಿ – 45 ಸೆಕೆಂದುಗಳು**

<><><>

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ** ವಿಶ್ವವಿದ್ಯಾಲಯ, ಹೊಸ ತಳಿಗಳ ಮೆಣಸಿನಕಾಯಿ ಬೆಳೆಗಳನ್ನು ಸಂಶೋಧಿಸಿದೆ; ನೂತನ ತಳಿಗಳು, ಬೆಳೆಗಾರರನ್ನು ಆರ್ಥಿಕವಾಗಿ ಹಾಗೂ ಗ್ರಾಹಕರನ್ನು ಆರೋಗ್ಯದ ದೃಷ್ಟಿಯಿಂದ ಪೋಷಿಸುವ, ಆಶಯವಿದೆ ಎಂದು, ಧಾರವಾಡ ಜಿಲ್ಲೆ, ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎಚ್. ಕೋನರೆಡ್ಡಿ ಹೇಳಿದ್ದಾರೆ. ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ, ಪ್ರೌಢ ಶಾಲೆ ಮೈದಾನದಲ್ಲಿ, ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ 14ನೇ ಒಣ ಮೆಣಸಿನಕಾಯಿ ಮೇಳ ಆಯೋಜಿಸಿದ್ದು, ಶಾಸಕ ಕೋನರಡ್ಡಿ ಚಾಲನೆ ನೀಡಿ ಮಾತನಾಡಿದರು. ಪ್ರಸಿದ್ಧ ಬ್ಯಾಡಗಿ ಮೆಣಸಿನಕಾಯಿ ತಳಿಯನ್ನು ಧಾರವಾಡ ಜಿಲ್ಲೆಯ ನವಲಗುಂದ ಹಾಗೂ ಕುಂದಗೋಳ, ಗದಗ ಹಾಗೂ ಜಿಲ್ಲೆಯ, ನರಗುಂದ, ಮತ್ತು ಬಾಗಲಕೋಟೆಯಲ್ಲಿ, ಹೆಚ್ಚು ಬೆಳೆಯಲಾಗುತ್ತದೆ ಎಂದರು.

<><><>

**17ನೇ ಆವೃತ್ತಿಯ, ಬೆಂಗಳೂರು ಅಂತಾರಾಷ್ಟ್ರೀಯ** ಚಲನಚಿತ್ರೋತ್ಸವ, ರಾಜ್ಯ ರಾಜಧಾನಿಯ, ಲುಲು ಮಾಲ್‌ನಲ್ಲಿ, ವರ್ಣರಂಜಿತವಾಗಿ ಸಮಾರೋಪಗೊಂಡಿತು. ಜಪಾನ್ ಚಿತ್ರ 'ಲಾಸ್ಟ್ ಲ್ಯಾಂಡ್' ಏ ್ಯ ವಿಭಾಗದಲ್ಲಿ, ಮರಾಠಿಯ 'ಸಬರ್ ಬೊಂಡಾ' ಭಾರತ ಮಟ್ಟದಲ್ಲಿ ಹಾಗೂ 'ವನ್ಯಾ' ಕನ್ನಡ ಭಾಷೆ ವಿಭಾಗದಲ್ಲಿ, ಅತ್ಯುತ್ತಮ ಚಿತ್ರ ಪ್ರಶಸ್ತಿಗಳಾಗಿ, ಮನ್ನಣೆ ಗಳಿಸಿವೆ. ಚಿತ್ರೋತ್ಸವ ಸಮಾರೋಪದ ಮುಖ್ಯ ಅತಿಥಿಯಾಗಿ, ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ, ಚಿತ್ರೋತ್ಸವದ ರಾಯಬಾರಿ ಪ್ರಕಾಶ ರೈ, ಕರ್ನಾಟಕ ಚಲನಚಿತ್ರ ಅಕಾದೆಮಿ ಅಧ್ಯಕ್ಷ ಸಾಧು ಕೋಕಿಲ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲ ಪಾಲ್ಗೊಂಡಿದ್ದರು. ಖ್ಯಾತ ಗೀತ ರಚನೆಕಾರ ಹಾಗೂ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ, ಶ್ರೇ ್ಠ ಜೀವಮಾನ ಸಾಧನೆ ಪ್ರಶಸ್ತಿ ನೀಡಿ, ಗಣ್ಯರು ಗೌರವಿಸಿದರು.

<><><>

**ಕರ್ನಾಟಕ ಶಿಲ್ಪಕಲಾ ಅಕಾದೆಮಿ,** 2024 ಹಾಗೂ 2025ನೇ ಸಾಲಿನ ಗೌರವ ಪ್ರಶಸ್ತಿ ಮತ್ತು 2024ನೇ ಸಾಲಿನ 'ಶಿಲ್ಪಶ್ರೀ' ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದೆ ಎಂದು, ಅಕಾದೆಮಿ ಅಧ್ಯಕ್ಷ ಎಂ.ಸಿ ರಮೇಶ ತಿಳಿಸಿದ್ದಾರೆ. 2024ನೇ ಸಾಲಿನ ಗೌರವ ಪ್ರಶಸ್ತಿಗೆ, ದಾವಣಗೆರೆಯ ಸಂಪ್ರದಾಯ ಶಿಲ್ಪ ಕಲಾವಿದ, ಎ.ಪಿ ಶ್ರೀಕಂಠಾಚಾರ್ಯ, ಧಾರವಾಡದ ಸಾಯಿನಾಥ ಭೀಮರಾಯಪ್ಪ, ಹಾವೇರಿಯ ಸೋಮಚಾರಿ ಸೇರಿದಂತೆ, 6 ಜನ ಕಲಾವಿದರು ಭಾಜನರಾಗಿದ್ದಾರೆ. 2025ನೇ ಸಾಲಿನ ಗೌರವ ಪ್ರಶಸ್ತಿಗೆ, ಕಲಬುರಗಿಯ ಕಲ್ಲಣ್ಣ ಕಂಬಾರ, ಗದಗ ಜಿಲ್ಲೆಯ ಯಚ್ಚರಪ್ಪ ಪತ್ತಾರ ಸೇರಿದಂತೆ, ಆರು ಜನ ಕಲಾವಿದರು ಆಯ್ಕೆಯಾಗಿದ್ದಾರೆ. ಶಿಲ್ಪಶ್ರೀ ಪ್ರಶಸ್ತಿಗೆ ಧಾರವಾಡದ ನವೀನ ಕಡ್ಲಾಸ್ಕರ, ದಕ್ಷಿಣಕನ್ನಡ ಜಿಲ್ಲೆ, ಬಸ್ತಿಯ ಸದಾಶಿವ ಶೆಣೈ, ಸೇರಿದಂತೆ, ಒಟ್ಟು 10 ಜನ ಕಲಾವಿದರು ಭಾಜನರಾಗಿದ್ದಾರೆ. ಗೌರವ ಪ್ರಶಸ್ತಿ, 50 ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ. ಶಿಲ್ಪಶ್ರೀ ಪ್ರಶಸ್ತಿ, 25 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಹಾಗೂ ಶಿಲ್ಪಕಲಾ ಪ್ರದರ್ಶನ, ಮಾರ್ಚ್ ತಿಂಗಳಲ್ಲಿ ಜರುಗಲಿದೆ ಎಂದು, ಅಕಾದೆಮಿ ರಜಿಸ್ಟ್ರಾರ್ ಆರ್. ಚಂದ್ರಶೇಖರ ತಿಳಿಸಿದ್ದಾರೆ.

<><><>

**ರಸ್ತೆ ಅಪಘಾತದಲ್ಲಿ ಮೃತಪಟ್ಟ,** ಧಾರವಾಡದ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆ ಪೇದೆ, ಯಲ್ಲಪ್ಪ ಮಡಿವಾಳಪ್ಪ ಕುಂಬಾರ ಅವರ ಕುಟುಂಬಕ್ಕೆ, 70 ಲಕ್ಷ ರೂಪಾಯಿ ಪರಿಹಾರದ ಚೆಕ್ ಹಸ್ತಾಂತರಿಸಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ,

ಸಾಂತ್ವನ ಹೇಳಿದರು. ವಿಶ್ರಾಂತ ಏರ್ ಕಮೋಡೋರ್ ತರುಣಕುಮಾರ ಸಿನ್ಹಾ, ವಿಶೇಷ ಕವಾಯತಿನಲ್ಲಿ ಪಾಲ್ಗೊಂಡು, ಪೊಲೀಸ್ ಸಿಬ್ಬಂದಿ ಕಾರ್ಯ ತತ್ಪರತೆ ಶ್ಲಾಘಿಸಿದರು.

<><><>

**ಆಕಸ್ಮಿಕ ವಿಪತ್ತುಗಳ ಸಂದರ್ಭದಲ್ಲಿ,** ತಕ್ಷಣ ಸ್ಪಂದಿಸಿ, ಜನ, ಜಾನುವಾರು, ಪಕ್ಷಿಗಳ ಪ್ರಾಣ ಹಾಗೂ ಆಸ್ತಿಗಳ ರಕ್ಷಣೆಗಾಗಿ, ಪೂರ್ವ ಸಿದ್ಧತೆ ಹಾಗೂ ಸೂಕ್ತ ಸನ್ನದ್ಧತೆ ದೃಷ್ಟಿಯಿಂದ, ವಿಪತ್ತು ನಿರ್ವಹಣೆ ಅಣುಕು ಕಾರ್ಯಾಚರಣೆ ಸಹಕಾರಿ ಎಂದು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ, ಧಾರವಾಡ ಜಿಲ್ಲೆ, ಪಬಾರಿ ಜಿಲ್ಲಾಧಿಕಾರಿ, ಭುವನೇಶ ಪಾಟೀಲ, ಹೇಳಿದ್ದಾರೆ. ಧಾರವಾಡದ ರಾಯಾಪುರ ಕೈಗಾರಿಕಾ ಪ್ರದೇಶದಲ್ಲಿ, ಎಚ್.ಪಿ.ಸಿ.ಎಲ್. ಆಯಿಲ್ ಘಟಕದಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣೆ – ಎನ್.ಡಿ.ಆರ್.ಎಫ್. ವಿಜಯವಾಡಾ ಘಟಕದ ನುರಿತ ಸಿಬ್ಬಂದಿ, ಗ್ಯಾಸ್ ಸೋರಿಕೆ ಅವಘಡ ತಡೆಗಟ್ಟುವ, ಅಣುಕು ಕಾರ್ಯಾಚರಣೆ ಕೈಗೊಂಡು, ಸಾರ್ವಜನಿಕರ ಸ್ಪಂದನೆ ವಿಪತ್ತಿನ ಸಂದರ್ಭದಲ್ಲಿ ಹೇಗಿರಬೇಕು ಎಂಬ ಅರಿವು ಮೂಡಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ನೈಋತ್ಯ ರೇಲ್ವೆ: ಅಳ್ನಾವರ–ದಾಂಡೇಲಿ ಮಧ್ಯೆ, ನೂತನ** ರೈಲು ಸೇವೆಗೆ, ಇಂದು ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಚಾಲನೆ.

**ಸಂಸದರ ಖೇಲ್ ಹಾಗೂ ಸಾಂಸ್ಕೃತಿಕ ಮಹೋತ್ಸವ:** ಅಂತಾರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ, ಹುಬ್ಬಳ್ಳಿಯಲ್ಲಿ ಇಂದು ಚಾಲನೆ.

**17ನೇ ಆವೃತ್ತಿಯ, ಬೆಂಗಳೂರು ಅಂತಾರಾಷ್ಟ್ರೀಯ** ಚಲನಚಿತ್ರೋತ್ಸವಕ್ಕೆ ತೆರೆ; 'ವನ್ಯಾ' ಕನ್ನಡ ಭಾಷೆಯ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ, ಭಾಜನ.

**14ನೇ ಒಣ ಮೆಣಸಿನಕಾಯಿ ಮೇಳ;** ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದಲ್ಲಿ, ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಆಯೋಜನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>